ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 118-125
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ಸಮಸ್ತ ಕಾರ್ಮಿಕ ಬಂಧುಗಳ ಸಂರಕ್ಷಕ; ಡಾ. ಬಾಬೂ ಜಗಜೀವನರಾಮ್

**ಡಾ. ಶಂಕರ ಆರ್ ಗೇರುಮಾಳಂ**
ಮಾನವಶಾಸ್ತ್ರ ಸಂಶೋಧಕ, ಮೈಸೂರು

**Abstract:**
*ಬಾಬು ಜಗಜೀವನರಾಮ್‌ರವರು ಬಿಹಾರ ರಾಜ್ಯದ ಭೋಜ್‌ಪುರ ಜಿಲ್ಲೆಯ ಚಾಂದ್ವ ಗ್ರಾಮದಲ್ಲಿ ಏಪ್ರಿಲ್ 5, 1908ರಂದು ಜನಿಸಿದರು. ತಂದೆ ಶೋಭಿರಾಮ್, ತಾಯಿ ವಾಸಂತಿದೇವಿ. ಇವರ ಕಾರ್ಯದಕ್ಷತೆಯನ್ನು ಕಂಡಂತಹ ಗಾಂಧೀಜಿಯವರು 'ಅಗ್ನಿಯಲ್ಲಿ ಪುಟವಿಟ್ಟ ಚಿನ್ನ' ಎಂದು ಪ್ರಸಂಶಿಸುತ್ತಾರೆ. ಜಗಜೀವನರಾಮ್‌ರವರು ಯಾವೊಬ್ಬ ನಾಯಕನ ಪ್ರಭಾವಕ್ಕೆ ಅಥವಾ ಸಿದ್ಧಾಂತಕ್ಕೆ ಜೋತುಬಿದ್ದವರಲ್ಲ. ಇವರ ಸಮಕಾಲೀನ ನಾಯಕರುಗಳಲ್ಲಿ ಗಾಂಧೀಜಿ, ಡಾ.ಅಂಬೇಡ್ಕರ್, ಡಾ.ರಾಜೇಂದ್ರ ಪ್ರಸಾದ್, ನೇತಾಜಿ, ಸರ್ದಾರ್ ವಲ್ಲಭಬಾಯಿ ಪಟೇಲ್ ಮತ್ತಿತರರು. ಗಾಂಧೀಜಿಯವರ ಅನುಯಾಯಿಯಾದರೂ ಸಹ ಅವರ ಎಲ್ಲಾ ಸೈದ್ಧಾಂತಿಕ ನಿಲುವುಗಳನ್ನು ಒಪ್ಪಿದವರಲ್ಲ. ಪೂನ ಒಪ್ಪಂದದ(1932), ಹರಿಜನ ಪದ ಪ್ರಯೋಗ, ಹರಿಜನ ಸೇವಾ ಸಂಘದ ಕಾರ್ಯಗಳು, ಮತದಾನದ ಹಕ್ಕು ಇನ್ನಿತರ ಸಂದರ್ಭಗಳಲ್ಲಿ ವಿರೋಧಿ ನಿಲುವನ್ನು ತಳೆದಿದ್ದಾರೆ. ಅಂಬೇಡ್ಕರ್‌ರವರ ಕಾರ್ಯಗಳನ್ನು ಮೆಚ್ಚಿಕೊಂಡರೂ ಕೂಡ ಮತಾಂತರವನ್ನು ಬೆಂಬಲಿಸಲಿಲ್ಲ. ಆದರೂ ಅಂಬೇಡ್ಕರರ ಆಶಯವಾದ ದಲಿತ ಸಾಹಿತ್ಯ ಸಂಘವನ್ನು ಸ್ಥಾಪಿಸಿ, ಅವರು ಬಿಟ್ಟು ಹೋಗಿರುವ ಕೆಲಸಗಳನ್ನು ಪೂರ್ಣಗೊಳಿಸುವ ಪ್ರತಿಜ್ಞೆಗೈಯುತ್ತಾರೆ. ಈ ಲೇಖನದಲ್ಲಿ ಬಾಬೂ ಜಗಜೀವನರಾಮ್ ಕಾರ್ಮಿಕ ಕಲ್ಯಾಣಕ್ಕಾಗಿ ನೀಡಿದ ಕೊಡುಗೆಗಳನ್ನು ಚರ್ಚಿಸಲಾಗಿದೆ.*

**Keywords:** *ಬಾಬೂ ಜಗಜೀವನರಾಮ್, ಕಾರ್ಮಿಕ ಕಾನೂನು, ಕಾರ್ಮಿಕರ ಸಂರಕ್ಷಣೆ.*

## ಪೀಠಿಕೆ

ಕಾಲೇಜಿನ ದಿನಗಳಲ್ಲಿಯೇ ದಾಸ್ ಕ್ಯಾಪಿಟಲ್ ಮತ್ತು ಕಮ್ಯುನಿಸ್ಟ್ ಮ್ಯಾನಿಫೆಸ್ಟೊ ಓದಿದರೂ ಸಹ ನೇತಾಜಿಯವರ ತೀವ್ರಗಾಮಿತನವನ್ನು ಅಪ್ಪಿಕೊಳ್ಳದ ಜಗಜೀವನರಾಮರು ತಮ್ಮದೇಯಾದ ನಿಲುವಳಿಗಳ ಮುಖಾಂತರ ಅಸಂಖ್ಯಾತ ಭಾರತೀಯರ ಧೀಮಂತ ರಾಷ್ಟ್ರನಾಯಕರಾಗಿ ಹೊರಹೊಮ್ಮುತ್ತಾರೆ. ಜಗಜೀವನರಾಮ್‌ರವರು ಬಿಹಾರದಲ್ಲಿ ದುಡಿಯುವ ವರ್ಗದ ಪ್ರಾದೇಶಿಕ ಸಮ್ಮೇಳನದ ನೇತೃತ್ವ ವಹಿಸಿ, ಜನಮನ್ನಣೆಗಳಿಸಿ ಯಶಸ್ವಿಯಾದ್ದರಿಂದ ರಾತ್ರೋರಾತ್ರಿ ಕಾರ್ಮಿಕರ ನಾಯಕರಾಗಿ, ಕಾರ್ಮಿಕರ ಹಿತರಕ್ಷಕರಾಗಿ ಜನಮನ್ನಣೆಗಳಿಸಿದರು.

ಬಾಬೂಜಿಯವರು ಒಬ್ಬ ರಾಷ್ಟ್ರೀಯವಾದಿ. ಇವರ ದೃಷ್ಟಿಯಲ್ಲಿ ರಾಷ್ಟ್ರ ನಿರ್ಮಾಣ ಪ್ರಕ್ರಿಯೆ ಎಂಬುದು 'ನಿಂತ ನೀರಲ್ಲ, ನದಿಯಂತೆ ನಿರಂತರ ಹರಿಯುವ ಪ್ರಕ್ರಿಯೆ'ಯಾಗಿದೆ. ಒಂದು ರಾಷ್ಟ್ರವು ವಿಶ್ವದಲ್ಲಿಯೇ ಅಭಿವೃದ್ಧಿ ಹೊಂದಿದ ರಾಷ್ಟ್ರ ಎಂಬುದಾಗಿ ಕರೆಸಿಕೊಳ್ಳಬೇಕೆಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಎಲ್ಲಾ

***Please cite this article as:*** ಶಂಕರ ಆರ್ ಗೇರುಮಾಳಂ (2025). ಸಮಸ್ತ ಕಾರ್ಮಿಕ ಬಂಧುಗಳ ಸಂರಕ್ಷಕ; ಡಾ. ಬಾಬೂ ಜಗಜೀವನರಾಮ್. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 3(6), 118–125

ರಂಗದಲ್ಲಿಯೂ ಸಹ ಬೆಳವಣಿಗೆ ಹೊಂದಿರಬೇಕು. ಹಾಗೆಯೇ ಭಾರತವು ಅಭಿವೃದ್ಧಿಯಲ್ಲಿ ಮುಂಚೂಣಿಗೆ ಬರಬೇಕಾದರೆ ಬಹುಸಂಖ್ಯಾತ ದಲಿತರ ಪಾಲ್ಗೊಳ್ಳುವಿಕೆ ಬಹುಮುಖ್ಯ ಅಂಶವಾಗಿರುತ್ತದೆ. ಇದು ಬಾಬೂಜಿಯವರ ರಾಷ್ಟ್ರೀಯವಾದ ಮತ್ತು ದಲಿತರ ಸಾಮಾರ್ಥ್ಯವನ್ನು ಕುರಿತು ತಿಳಿಸುವ ಅಂಶ.

ಬಾಲ್ಯದಿಂದಲೂ ಹೋರಾಟದ ಮನೋಭಾವ ಬೆಳೆಸಿಕೊಂಡಿದ್ದ ಜಗಜೀವನರಾಮ್‌ರವರು ಗಾಂಧೀಜಿ ಯವರ ಪ್ರಭಾವಕ್ಕೆ ಒಳಗಾಗಿ 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸಮಾರು ಒಂದು ವರ್ಷಕಿಂತಲೂ ಅಧಿಕ ಸೆರೆಮನೆ ವಾಸ ಅನುಭವಿಸುತ್ತಾರೆ. ಇದು ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ದಲಿತರ ಭಾಗವಹಿಸುವಿಕೆ ಹಾಗೂ ಮುಂದಾಳತ್ವಕ್ಕೆ ಪ್ರೇರಣೆಯಾಗುತ್ತದೆ. ಇದರಿಂದಾಗಿ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ನಾಯಕರಾಗಿ ಗುರುತಿಸಿಕೊಂಡರು. 1945ರಲ್ಲಿ ಇಂಗ್ಲೆಂಡಿನಲ್ಲಿ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದಾಗ ಪ್ರಧಾನಿ 'ಕ್ಲೇಮೆಟ್ ಆಟ್ಲೆ'ಯವರು ಭಾರತದಲ್ಲಿ ಸರ್ಕಾರ ರಚಿಸಲು ಹಸಿರುನಿಶಾನೆ ತೋರಿಸುತ್ತಾರೆ. ಕಾಂಗ್ರೆಸ್ ಮತ್ತು ಮುಸ್ಲಿಂಲೀಗ್‌ನ ನಡುವೆ ಇದ್ದಂತಹ ಸಮಸ್ಯೆಗಳನ್ನು ಬಗೆಹರಿಸಿದ ಬಾಬೂಜಿಯವರು ಹಿರಿಯ ರಾಷ್ಟ್ರೀಯ ನಾಯಕರಿಂದ ಪ್ರಶಂಸೆಗೊಳಪಡುತ್ತಾರೆ. 1946ರಲ್ಲಿ ಲಾರ್ಡ್ ವೆವಲ್‌ರವರ ಆಹ್ವಾನದ ಮೇರೆಗೆ ಮಧ್ಯಂತರ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ. ನಂತರ 1947ರಲ್ಲಿ ಪೂರ್ಣ ಪ್ರಮಾಣದ ಕಾರ್ಮಿಕ ಸಚಿವರಾಗಿ, ಕಾರ್ಮಿಕ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣವಾಗಿ ಅರಿತಿದ್ದ ಇವರು ಕಾರ್ಮಿಕರ ಬಲವರ್ಧನೆಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆತಂದರು.

ಅಧಿಕಾರ ವಹಿಸಿಕೊಂಡ ನಂತರ ಜಗಜೀವನ್‌ರಾಮ್‌ರವರು ದೇಶದ ಉದ್ದಗಲಕ್ಕೂ ಸಂಚರಿಸಿ, ರಾಷ್ಟ್ರದ ಸಮಸ್ತ ಕಾರ್ಮಿಕರ ಹಿತದೃಷ್ಟಿಯಿಂದ ಹಲವಾರು ಕಾಯಿದೆ ಕಾನೂನುಗಳನ್ನು ಜಾರಿಗೆತರುತ್ತಾರೆ. ಈ ಕಾನೂನುಗಳಲ್ಲಿ ಬಾಲ್ಯದ ನೆನಪುಗಳು, ಹತ್ತಿ ಮತ್ತು ಸೆಣಬು ಗಿರಣಿ ಕಾರ್ಮಿಕರನ್ನು ಸಂಘಟಿಸಿ ಮಜ್ದೂರ್ ರ‍್ಯಾಲಿ(1928) ನಡೆಸಿದ್ದು, ದಲಿತ ವರ್ಗ ಸಂಘ, ಕೃಷಿ–ಕಾಮಿಕ ಸಂಘ(1946) ಇತ್ಯಾದಿಗಳ ಪ್ರಭಾವವಿದೆ. ಒಮ್ಮೆ ದಲಿತ ವರ್ಗದ ಸಂಘದ ಸಭೆಯಲ್ಲಿ "ಭಾರತೀಯ ಕೃಷಿ ಕೂಲಿ ಕಾರ್ಮಿಕರಲ್ಲಿ ಶೇ.90 ಮಂದಿ ದಲಿತರಿದ್ದಾರೆ, ಇವರನ್ನು ಜಮೀನ್ದಾರರು ಹಾಗೂ ಭೂ ಮಾಲೀಕರು ಕಡಿಮೆ ಕೂಲಿಗೆ ಇಲ್ಲವೇ ಬಿಟ್ಟಿ ಚಾಕರಿಗೆ ನೇಮಿಸಿಕೊಂಡಿದ್ದಾರೆ. ಅದು ಸಮಂಜಸವಾದುದಲ್ಲ ಯಾರಿಗೆ ಉಳುಮೆ ಮಾಡಿ ಬೆಳೆ ತೆಗೆಯುವ ಯೋಗ್ಯತೆ ಇರುತ್ತದೋ ಅಂತಹವರಿಗೆ ಭೂಮಿಯನ್ನು ಹಂಚಿಕೆ ಮಾಡಬೇಕು" ಎಂದು ದನಿಯೆತ್ತುತ್ತಾರೆ.

ಬಾಬೂಜಿಯವರು 1947ರಲ್ಲಿ ಜಿನೇವಾದಲ್ಲಿ ನಡೆದಂತಹ ಅಂತರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಿ, ಐಎಲ್‌ಒ ಸಮ್ಮೇಳನವು ಪರಿಣಾಮಕಾರಿಯಾಗಬೇಕಾದರೆ ಕಾರ್ಮಿಕರ ಸುಧಾರಣೆಗೆ ಒತ್ತು ನೀಡಬೇಕು, ಪ್ರತಿ ದೇಶವು ಪ್ರಾಂತೀಯ ಮಟ್ಟಕ್ಕೆ ಅನುಗುಣವಾಗಿ ಕಾಯಿದೆ, ಕಾನೂನುಗಳನ್ನು ಜಾರಿಗೆತಂದು ಕಾರ್ಮಿಕರ ಹಿತ ಕಾಯಬೇಕು. ಜೊತೆಗೆ ಈ ಸಮ್ಮೇಳನವು ಏಷ್ಯಾದ ರಾಷ್ಟ್ರಗಳ ಸಾಮಾಜಿಕ–ಅರ್ಥಿಕ ಸಮಸ್ಯೆಗಳಿಗೆ ಒಂದು ಸಂಸ್ಥೆಯನ್ನು ನಿಯೋಜಿಸಬೇಕು. ಇದಕ್ಕಾಗಿ ನಾವು ಸಹಾಯ ಮತ್ತು ಮಾರ್ಗದರ್ಶನವನ್ನು ಬಯಸುತ್ತೇವೆ ಎಂದು ತಮ್ಮ ಭಾಷಣದಲ್ಲಿ ತಿಳಿಸುತ್ತಾರೆ.

ಜಗಜೀವನರಾಮ್ ಕಾರ್ಮಿಕ ಮಂತ್ರಿಯಾಗಿ 1946ರಿಂದ 1952ರವರೆಗೆ ಕಾರ್ಯನಿರ್ವಹಿಸುತ್ತಾರೆ. 1946ರ ಸಂದರ್ಭದಲ್ಲಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವಂತಹ ನೌಕರರು ಹಲವಾರು ಸೌಲಭ್ಯಗಳಿಂದ ವಂಚಿತರಾಗಿದ್ದರು. ಇಂತಹ ಸಂದರ್ಭದಲ್ಲಿ ನೌಕರರ ಸ್ಥಿತಿಗತಿಗಳನ್ನು ಅರಿತಿದ್ದ

ಜಗಜೀವನರಾಮ್‌ರವರು ಅದನ್ನು ಸುಧಾರಿಸಲು ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಕಾಪಾಡುವ ಹಿತಾದೃಷ್ಟಿಯಿಂದ ಈ ಕೆಳಗಿನ ಮೂರು ಮಸೂದೆಗಳನ್ನು ತತಕ್ಷಣದಲ್ಲಿ ಮಂಡಿಸುತ್ತಾರೆ. ಮುಂದೆ ಇವು 1948ರಲ್ಲಿ ಶಾಸನವಾಗಿ ಹೊರಹೊಮ್ಮುತ್ತವೆ.

- ಕನಿಷ್ಠ ಕೂಲಿ ಮಸೂದೆ–1946
- ಕೈಗಾರಿಕಾ ವಿವಾದ ಮಸೂದೆ–1946
- ಭಾರತೀಯ ವಾಣಿಜ್ಯ ಮಂಡಳಿ(ತಿದ್ದುಪಡಿ) ಮಸೂದೆ–1946 ಈ ಮೂರು ಮಸೂದೆಗಳು ಕಾಯಿದೆಗಳಾಗಿ ಪ್ರಸ್ತುತದಲ್ಲಿಯೂ ಚಾಲ್ತಿಯಲ್ಲಿವೆ.

ನಂತರ ಕೈಗಾರಿಕಾ ಉದ್ಯೋಗ ಕಾಯಿದೆ(1947)ಯನ್ನು ಪಾಸು ಮಾಡುತ್ತಾರೆ. ಈ ಕಾಯಿದೆಯು ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕ ವರ್ಗದವರಿಗೆ ಮೂಲಭೂತ ಸೌಲಭ್ಯಗಳ ಜೊತೆಗೆ ಅಗತ್ಯ ಆರೋಗ್ಯ ರಕ್ಷಣೆಯನ್ನು ಒದಗಿಸುತ್ತದೆ. ಈ ಕಾಯಿದೆಯ ಅನುಸಾರ ಕೈಗಾರಿಕೆಗಳಲ್ಲಿ ಉಂಟಾಗುವ ಮುಷ್ಕರ, ಭತ್ಯೆ, ಕಾರ್ಯನಿಲ್ಲಿಸುವಿಕೆ ಇತ್ಯಾದಿಗಳಲ್ಲಿ ಕಾಮಿರ್ಕಕರು ಮತ್ತು ಮಾಲೀಕರು ಸಮಯೋಜಿತವಾಗಿ ಕಾರ್ಯತತ್ಪರರಾಗಬೇಕು, 'ಕಾರ್ಖಾನೆಗಳು ಕಾರ್ಮಿಕರಿಂದ ನಡೆಯುತ್ತಿವೆ, ಕಾರ್ಮಿಕರ ಜೀವನವು ಕೈಗಾರಿಕೆಗಳನ್ನು ಅವಲಂಬಿತವಾಗಿವೆ'. ಈ ದೃಷ್ಟಿಯಿಂದ ಕಾರ್ಮಿಕರು ಕಾರ್ಯ ನಿಲ್ಲಿಸದೇ ಒಂದು ಸಂಘಟನೆಯನ್ನು ಸ್ಥಾಪಿಸಿಕೊಂಡು ಅದರ ಮುಖಾಂತರವಾಗಿ ತಮ್ಮ ಬೇಡಿಕೆಗಳನ್ನು ಸಲ್ಲಿಸಬೇಕು. ಕಾನೂನು ಬಾಹಿರವಾಗಿ ಮುಷ್ಕರಗಳು ಮತ್ತು ಬಾಗಿಲು ಮುಚ್ಚಿಸುವುದು ಇತ್ಯಾದಿಗಳನ್ನು ನಿಲ್ಲಿಸಬೇಕು. ಈ ಕಾಯಿದೆಯು ಕಾರ್ಮಿಕ ವರ್ಗದವರಿಗೆ ಮತ್ತಷ್ಟು ಚೈತನ್ಯವನ್ನು ನೀಡಿ, ಕಾರ್ಯದಕ್ಷವಾಗಿ ದುಡಿಯಲು ಅವಕಾಶ ನೀಡಿದಂತಾಯಿತು. ಮಾಲೀಕರು ಕಾರ್ಮಿಕರನ್ನು ನಿಷ್ಕರುಣೆಯಿಂದ ಕೆಲಸದಿಂದ ವಜಾಗೊಳಿಸುವುದನ್ನು ತಪ್ಪಿಸಿತು. 14ವರ್ಷ ಕೆಳಗಿನ ಮಕ್ಕಳನ್ನು ಕೆಲಸಕ್ಕೆ ನಿಯೋಜನೆ ಮಾಡುವುದು ಈ ಕಾಯಿದೆಯಿಂದ ಕಾನೂನು ಬಾಹಿರವಾಯಿತು. ಕೈಗಾರಿಕೆಗಳಲ್ಲಿ ನಡೆಯುತ್ತಿದ್ದ ಚಳುವಳಿಗಳು ಹಾಗೂ ಬೀಗ ಮುದ್ರೆಗಳನ್ನು ನಿಯಂತ್ರಿಸಿ ಕಾರ್ಮಿಕ ಮತ್ತು ಕೈಗಾರಿಕಾ ಆಡಳಿತ ಮಂಡಳಿ ನಡುವೆ ಉತ್ತಮ ಸಂಬಂಧವೇರ್ಪಡಲು ಸಹಕಾರಿಯಾಯಿತು. ಇದರಿಂದ ಕಾರ್ಮಿಕರು ಮತ್ತು ಮಾಲೀಕರ ನಡುವಿನ ಸಮರಕ್ಕೆ ವಿದಾಯ ಹೇಳಿ ಆರ್ಥಿಕ ಉನ್ನತಿಗೆ ಜಗಜೀವನರಾಮ್‌ರವರು ಕಾರಣರಾದರು.

1948ರ ಕಾರ್ಖಾನೆ ಕಾಯಿದೆಯ ಅನ್ವಯ ಕಾರ್ಖಾನೆಗಳನ್ನು ಎರಡು ವಿಧಗಳಾಗಿ ವಿಂಗಡಿಸಿದೆ. ಮೊದಲನೆಯದು ವಿದ್ಯುತ್ ಅಥವಾ ಬೇರೆ ನಿರ್ಜೀವ ಶಕ್ತಿಯ ನೆರವಿನಿಂದ ಉತ್ಪಾದನಾ ಕಾರ್ಯ ಮಾಡುವುದು. ಎರಡನೆಯದು ಯಾವುದೇ ನಿರ್ಜೀವ ಶಕ್ತಿಯ ನೆರವಿಲ್ಲದೆ ಉತ್ಪಾದನೆ ಮಾಡುವುದು. ಮೊದಲನೇ ವಿಧದ ಕಾರ್ಖಾನೆಯಲ್ಲಿ ಹತ್ತಕ್ಕಿಂತಲೂ ಅಧಿಕ ಮಂದಿ ನೌಕರರಿದ್ದರೆ, ಎರಡನೆಯದರಲ್ಲಿ 20ಕ್ಕಿಂತಲೂ ಅಧಿಕ ಕಾರ್ಮಿಕರಿದ್ದರೆ ಈ ಕಾಯಿದೆಯು ಅನ್ವಯವಾಗುತ್ತದೆ. ಈ ಕಾಯಿದೆಯ ಅನ್ವಯ ಹೊಗೆ, ಧೂಳು ಇತ್ಯಾದಿಗಳು ಹೊರ ಹೋಗುವಂತೆ ವ್ಯವಸ್ಥೆ ಮಾಡಬೇಕು. ಗಾಳಿ, ಬೆಳಕಿನ ಅವಕಾಶವಿರಬೇಕು. ವಾತವರಣವು ಸಮಸ್ಥಿತಿಯಲ್ಲಿರ ಬೇಕು. ಅತಿ ಶೈತ್ಯ ಇರಬಾರದು. ಕಾರ್ಮಿಕರಿಗೆ ನೈರ್ಮಲ್ಯವಾದ ಕುಡಿಯುವ ನೀರಿನ ವ್ಯವಸ್ಥೆ ಇರಬೇಕು. ಕಾರ್ಮಿಕರಿಗಾಗಿ ವಿಶ್ರಾಂತಿ ಗೃಹ, ಪ್ರಥಮ ಚಿಕಿತ್ಸೆ, ಉಪಹಾರ ಮಂದಿರ, ಹೆಂಗಸರು, ಮಕ್ಕಳಿಗಾಗಿ ಪ್ರತ್ಯೇಕ ಕೋಣೆಗಳು ಇಂತಹ ಸೌಲಭ್ಯವನ್ನು ಒದಗಿಸುವುದು ಅವಶ್ಯಕ ಎಂದು ಒಂದು ಸಮಗ್ರ ವ್ಯವಸ್ಥೆಯನ್ನು ರೂಪಿಸಿತು.

ಏಪ್ರಿಲ್ 1, 1948ರಲ್ಲಿ ಜಾರಿಗೆ ಬಂದ ಕಾರ್ಖಾನೆಗಳ ಕಾಯಿದೆಯು 1881ರಲ್ಲಿ ಪ್ರಥಮ ಬಾರಿಗೆ ಪ್ರವರ್ಧಮಾನಕ್ಕೆ ಬಂದಿತ್ತು. ಜಗಜೀವನರಾಮ್‌ರವರ ಆಲೋಚನಾ ಕ್ರಮದಿಂದ

ಮತ್ತಷ್ಟು ಸದೃಢಗೊಳಿಸಿ, ಕಾರ್ಮಿಕರ ಯೋಗಕ್ಷೇಮಾಭಿವೃದ್ಧಿಗೆ ತಿದ್ದುಪಡಿಗೊಳಿಸಲಾಯಿತು. ಈ ಕಾಯಿದೆಯೂ ಕಾರ್ಖಾನೆಗಳಲ್ಲಿ ಹದಿಹರೆಯದ ಮಕ್ಕಳು ಮತ್ತು ಮಹಿಳೆಯರನ್ನು ಅಪಾಯಕಾರಿ ಸ್ಥಳಗಳಲ್ಲಿ ಕೆಲಸಕ್ಕೆ ನೇಮಿಸುವುದು ಅಪರಾಧ ಎಂದು ತಿಳಿಸುತ್ತದೆ. ಕೈಗಾರಿಕೆಗಳಲ್ಲಿ ದುಡಿಯುವಂತಹ ನೌಕರರಿಗೆ ಕನಿಷ್ಠ ಕೂಲಿಯನ್ನು ನಿಗದಿಪಡಿಸುವ ವಿಚಾರವಾಗಿ 1943, 1944, 1945ರಲ್ಲಿ ತ್ರಿಪಕ್ಷೀಯ ಕಾರ್ಮಿಕ ಸಮ್ಮೇಳನದಲ್ಲಿ ಕಾರ್ಮಿಕರ ಸ್ಥಿತಿಗತಿಗಳ ಕುರಿತು ಚರ್ಚಿಸಲಾಯಿತು. 1948ರ ಕಾರ್ಖಾನೆಗಳ ಕಾಯಿದೆ ಪ್ರಕಾರ 'ಪ್ರತಿ ಕೈಗಾರಿಕೋದ್ಯಮಿಯು ತನ್ನ ಉದ್ಯೋಗಿಗಳಿಗೆ ಕಡ್ಡಾಯವಾಗಿ ನೀಡಲೇಬೇಕಾದ ಕೆಲವು ಸೌಲಭ್ಯಗಳೆಂದರೆ, ಕುಡಿಯಲು ಶುದ್ಧ ಮತ್ತು ತಂಪಾದ ನೀರನ್ನು ಒದಗಿಸಬೇಕು ಜೊತೆಗೆ ಕೆಲಸದ ಸ್ಥಳದಲ್ಲಿ ಶೌಚಗೃಹವಿರಬೇಕು. 250 ನೌಕರರಿರುವ ಕಾರ್ಖಾನೆಯಲ್ಲಿ ಉಪಹಾರ ಮಂದಿರ, 50ಕ್ಕಿಂತಲೂ ಅಧಿಕ ಮಹಿಳಾ ನೌಕರರಿರುವ ಕಡೆ ಶಿಶು ವಿಹಾರ, 150 ಜನರಿರುವ ಕಾರ್ಖಾನೆಗಳಲ್ಲಿ ವಿಶ್ರಾಂತಿಗೃಹ ಹಾಗೂ ಉಪಹಾರ ಕೋಣೆ, ಪ್ರತಿ 150 ಕಾರ್ಮಿಕರಿಗೆ ಒಂದರಂತೆ ಪ್ರಥಮ ಚಿಕಿತ್ಸೆ ಪೆಟ್ಟಿಗೆ, 500 ನೌಕರರಿರುವ ಕಾರ್ಖಾನೆಯಲ್ಲಿ ಅಂಬುಲೆನ್ಸ್‌ನ ವ್ಯವಸ್ಥೆ, ಅಲ್ಲದೆ ಆಕಸ್ಮಿಕ ಅಪಘಾತಗಳನ್ನು ತಡೆಗಟ್ಟಲು ಯಂತ್ರಗಳಿಗೆ ಬೇಲಿ ಅಥವಾ ಕಟಕಟೆ ನಿರ್ಮಾಣ, ಕಾರ್ಮಿಕರಿಗೆ ಸುರಕ್ಷತೆಯ ವಸ್ತ್ರಗಳು, ಪಾದರಕ್ಷೆಗಳು, ಕನ್ನಡಕಗಳು ಮೊದಲಾದವುಗಳನ್ನು ಒದಗಿಸಲೇಬೇಕೆಂಬ ಕಟ್ಟುಪಾಡುಗಳನ್ನು ಈ ಕಾಯಿದೆಯ ಮುಖಾಂತರ ವಿಧಿಸಿದರು.

ಕೈಗಾರಿಕಾ ವಿವಾದ ಕಾಯಿದೆ–1947ರಲ್ಲಿ ಮಾಲಿಕ ಮತ್ತು ಕಾರ್ಮಿಕರ ನಡುವೆ ಉದ್ಭವಿಸುವ ವಿವಾದವನ್ನು ತಡೆಯುವ ಕಾಯಿದೆ. ಒಂದು ವೇಳೆ ವಿವಾದ ಸಂಭವಿಸಿದರೆ ಅದನ್ನು ಇತ್ಯಾರ್ಥಗೊಳಿಸುವುದು ಈ ಕಾಯಿದೆಯ ಉದ್ದೇಶ. ಈ ಕಾಯಿದೆಯನ್ನು ಸಂದರ್ಭಾನುಸಾರವಾಗಿ ತಿದ್ದುಪಡಿಗೆ ಒಳಪಡಿಸಲಾಗಿದೆ. ಇದರ ಪ್ರಕಾರ ನಿಗಧಿ ಪಡಿಸಿದ ಸಂಖ್ಯೆಯನ್ನು ಒಳಗೊಂಡಿರುವ ಕಾರ್ಖಾನೆಯು ಕಾರ್ಮಿಕ ಸಮಿತಿಯೊಂದನ್ನು ರಚಿಸಬೇಕು. ಇದರಲ್ಲಿ ಮಾಲಿಕ–ಕಾರ್ಮಿಕರ ಎರಡು ಪಕ್ಷಗಳ ಸಮಸಮ ಪ್ರತಿನಿಧಿಗಳಿರಬೇಕು. ಇದರ ಉದ್ದೇಶ ಎರಡೂ ಕಡೆಯೂ ಸಾಮರಸ್ಯ ಸ್ಥಾಪನೆ ಮಾಡುವುದಾಗಿರುತ್ತದೆ. ಕಾರ್ಖಾನೆಯಲ್ಲಿ ಯವುದಾದರು ವಿವಾದ ಸಂಭವಿಸಿದರೆ ಅದನ್ನು ಸಂಧಾನಗೊಳಿಸಲು ಸರ್ಕಾರವು ಸಂಧಾನಾಧಿಕಾರಿಯನ್ನು ನೇಮಿಸುವ ಅಧಿಕಾರವನ್ನು ಹೊಂದಿದೆ. ಇವರಿಂದ ಸಂಧಾನ ವಿಫಲವಾದರೆ ಸರ್ಕಾರವು ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

1. ರಾಜಿ ಮಂಡಳಿಯೊಂದಕ್ಕೆ ವಿವಾದ ಸಲ್ಲಿಸುವುದು.
2. ವಿವಾದಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ವಿಚಾರಣೆ ನಡೆಸಿ ವರದಿ ಒಪ್ಪಿಸಲು ವಿಚಾರಣಾಲಯಕ್ಕೆ ಸಲ್ಲಿಕೆ.
3. ಕೆಲಸಗಾರರ ವಜಾ, ಅವರಿಗೆ ನೀಡಲಾಗಿದ್ದ ಸೌಲಭ್ಯಗಳ ರದ್ದು, ಮುಷ್ಕರ, ಬೀಗಮುದ್ರೆ ಮುಂತಾದ ವಿಚಾರಣೆಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ವಿವಾದಗಳನ್ನು ವಿಚಾರಣೆಗಾಗಿ ಕಾರ್ಮಿಕ ನ್ಯಾಯಲಯಕ್ಕೆ ಒಪ್ಪಿಸುವುದು.
4. ವಿವಾದದ ಬಗ್ಗೆ ನ್ಯಾಯ ನಿರಾಶಯ ನೀಡಲು ನ್ಯಾಯಪೀಠವೊಂದಕ್ಕೆ ಅದನ್ನು ಒಪ್ಪಿಸುವುದು.
5. ಕಾನೂನಿಗೆ ವಿರೋಧವಾಗಿ ಮುಷ್ಕರ ಅಥವಾ ಬೀಗ ಮುದ್ರೆಗೆ ಕಾರಣರಾದವರಿಗೆ ಕಾಯಿದೆಯ ಪ್ರಕಾರ ಶಿಕ್ಷಾರ್ಹರು.

ಈ ಕಾಯಿದೆಯನ್ನು ಸದುಪಯೋಗ ಪಡಿಸಿಕೊಳ್ಳಲು ಕೇಂದ್ರ ಸರ್ಕಾರದ ಸೂಚನೆಯಂತೆ ನೇಮಕದಾರ ಮತ್ತು ಉದ್ಯೋಗಿಗಳ ಅಖಿಲ ಭಾರತ ಸಂಸ್ಥೆಗಳು ಕೈಗಾರಿಕೆಯಲ್ಲಿ ಶಿಸ್ತಿಗೆ ಸಂಬಂಧಿಸಿದಂತೆ ನೀತಿ ಸಂಹಿತೆಯೊಂದನ್ನು ರಚಿಸಿಕೊಂಡಿವೆ.

ಜಗಜೀವನರಾಮ್‌ರವರು ಆಯಾ ರಾಜ್ಯ ಸರ್ಕಾರಗಳು ಕೈಗಾರಿಕೆಗಳಲ್ಲಿ ಕೆಸ ಮಾಡುವಂತಹ

'ಕಾರ್ಮಿಕರ ಕನಿಷ್ಠ ಕೂಲಿ ನಿಗದಿಪಡಿಸುವ ಹಕ್ಕು' ಪುನರ್‌ವಿಮರ್ಶೆ, ಪುನರ್ ಪರಿಶೀನೆ, ತಿದ್ದುಪಡಿ ಮುಂತಾದವುಗಳನ್ನು ಪರಾಮರ್ಶಿಸಿ ಮಾರ್ಚ್ 1948ರಲ್ಲಿ ಕನಿಷ್ಠ ಕೂಲಿ ಕಾಯಿದೆಯನ್ನು ಜಾರಿಗೆತಂದರು. 'ಸಮಾನ ಕೆಸಕ್ಕೆ ಸಮಾನ ವೇತನ' ಎಂಬ ಪರಿಕಲ್ಪನೆಯನ್ನು ಈ ಕಾಯಿದೆಯು ಹೊಂದಿತ್ತು. ಕಾರ್ಖಾನೆಗಳು ಮತ್ತು ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಕೆಲಸಕ್ಕೆ ತಕ್ಕಂತೆ ಭತ್ಯೆ ಕೊಡಬೇಕೆಂದು ಜಗಜೀವನರಾಮ್ ಅವರ ಆಶಯವಾಗಿತ್ತು. ಜೊತೆಗೆ ದೂರದ ಪ್ರಯಾಣದ ವೇಳೆ ಪ್ರಯಾಣ ಭತ್ಯೆಯನ್ನು ನೀಡಲು ಈ ಕಾಯಿದೆಯು ಪ್ರೋತ್ಸಾಹದಾಯಕವಾಗಿತ್ತು.

ಕಾರ್ಮಿಕ ಮಂತ್ರಿಯಾಗಿ ಜಗಜೀವನ್‌ರಾಮರು ನೀಡಿದಂತಹ ಮತ್ತೊಂದು ಕೊಡುಗೆ ಎಂದರೆ ನೌಕರರ ರಾಜ್ಯ ವಿಮಾ ಮಸೂದೆ 1948ನ್ನು ಜಾರಿಗೆ ತಂದಿದ್ದು, ಈ ನಿಧಿಗೆ ಉದ್ಯೋಗಿ ಮತ್ತು ಉದ್ಯೋಗದಾತ ಇಬ್ಬರೂ ಸಮನಾಗಿ ವಂತಿಗೆ ನೀಡಬೇಕಾಯಿತು. ಈ ಹಣವನ್ನು ಕೇಂದ್ರ ಸರ್ಕಾರದ ಸೆಕ್ಯುರಿಟಿಯಲ್ಲಿಡಬೇಕು. ಇದರಿಂದ ಬಂದ ಲಾಭಾಂಶವನ್ನು ಕೂಡ ಈ ನಿಧಿಗೆ ಜಮಾ ಮಾಡಲಾಗುತ್ತಿತ್ತು.

ನೌಕರರ ವಿಮಾ ಯೋಜನೆ ಕುರಿತು 1927ರಲ್ಲಿ ಬ್ರಿಟಿಷ್ ಸರ್ಕಾರದಲ್ಲಿ ಸುದೀರ್ಘ ಚರ್ಚೆಗಳು ನಡೆದಿದ್ದವು, ಆದರೆ ಅದನ್ನು ಜಾರಿಗೆತರಲಾಗಲಿಲ್ಲ. ಇದರ ಮಹತ್ವವನ್ನು ಅರಿತಿದ್ದ ಜಗಜೀವನರಾಮ್‌ರವರು ನವೆಂಬರ್ 6, 1947ರಲ್ಲಿ ಈ ಯೋಜನೆಯನ್ನು ರಾಷ್ಟ್ರದಾದ್ಯಂತ ಜಾರಿಗೊಳಿಸಿದರು. ಇದರ ನಡುವೆಯೇ ಆರೋಗ್ಯ ಮತ್ತು ಅನಾರೋಗ್ಯ ವಿಮೆಯನ್ನು ಜಾರಿಗೆತಂದರು. ಆರೋಗ್ಯ ವಿಮಾ ಯೋಜನೆಯು ಏಷ್ಯಾದಲ್ಲಿಯೇ ಪ್ರಪ್ರಥಮ ಬಾರಿಗೆ ಜಾರಿಗೆತಂದ ಕೀರ್ತಿ ಜಗಜೀವನರಾಮ್‌ರವರಿಗೆ ಸಲ್ಲುತ್ತದೆ. ಕಾರ್ಖಾನೆಗಳಲ್ಲಿ ಮತ್ತು ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಅಧಿಕ ವೆಚ್ಚಭರಿತ ಅನಾರೋಗ್ಯ ಉಂಟಾದರೆ ಈ ಯೋಜನೆಯ ಮುಖಾಂತರ ಫಲದಾಯಕ ಪಡೆಯಬಹುದಾಗಿತ್ತು. ಹಾಗೆಯೇ ಕೆಲಸದ ಸಂದರ್ಭದಲ್ಲಿ ದೈಹಿಕ ವಿಕಲಾಂಗತೆ ಉಂಟಾದರೆ, ಅಂತಹವರು ಈ ಯೋಜನೆಯ ಸದುಪಯೋಗವನ್ನು ಪಡೆಯಬಹುದಾಗಿತ್ತು.

1947ರ ಸುಮಾರಿಗೆ ಭಾರತದಲ್ಲಿ ಬಹಳಷ್ಟು ಕೈಗಾರಿಕೆಗಳು ಪ್ರವರ್ಧಮಾನಕ್ಕೆ ಬಂದಿದ್ದವು. ಇಂತಹ ಸಂದರ್ಭದಲ್ಲಿ ಕಲ್ಲಿದ್ದಲು ಮತ್ತು ಮೈಕಾ ಗಣಿಗಳಲ್ಲಿನ ನೌಕರರ ಭದ್ರತೆಯನ್ನು ಕಾಪಾಡುವ ದೃಷ್ಟಿಯಿಂದ, 1947ರಲ್ಲಿ 'ಕಲ್ಲಿದ್ದಲು ಗಣಿ ನೌಕರರ ಯೋಗಕ್ಷೇಮ ನಿಧಿ'ಯನ್ನು ಸ್ಥಾಪನೆ ಮಾಡಿ, ಈ ಯೋಜನೆಯು ನೌಕರರ ವೈದ್ಯಕೀಯ ವೆಚ್ಚ, ಮನೋರಂಜನೆ, ವಿದ್ಯಾಭ್ಯಾಸ ಹಾಗೂ ಅವರ ವಸತಿ ಸೌಲಭ್ಯಗಳನ್ನು ಒಳಗೊಂಡಿತು. ನಂತರದ ಅವಧಿಯಲ್ಲಿ ಜಗಜೀವನರಾಮರು ಜಾರಿಗೆ ತಂದ ಮತ್ತೊಂದು ಕಾರ್ಮಿಕರ ಯೋಜನೆ ಎಂದರೆ '1948ರ ಕಲ್ಲಿದ್ದು, ಗಣಿ ಭವಿಷ್ಯನಿಧಿ ಯೋಜನೆ'. ಈ ಯೋಜನೆಯು ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಿ ಅವರ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿತು.

ಕಾರ್ಮಿಕನೆಂದರೆ ಸಣ್ಣ ಕೈಗಾರಿಕೆ ಹಾಗೂ ಬೃಹತ್ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುವವರೆಲ್ಲ ಕಾರ್ಮಿಕರೆ. ಇದರ ಜೊತೆಗೆ ಪ್ಲಾಂಟೇಷನ್ ಮತ್ತು ಬಂದರುಗಳಲ್ಲಿ ಕಾರ್ಯನಿರ್ವಹಿಸುವವರನ್ನೂ ಗಣನೆಗೆ ತೆಗೆದುಕೊಳ್ಳಲಾಯಿತು. ಕಾರ್ಮಿಕರ ಸರ್ವತೋಮುಖ ಅಭಿವೃದ್ಧಿಗೆ ನೀಡಿದ ಕೊಡುಗೆಯಲ್ಲಿ ಮತ್ತೊಂದು ಗರಿ ಅದುವೇ 'ನೌಕರರ ಭವಿಷ್ಯ ನಿಧಿ' ಯೋಜನೆ(1952). ಇದರ ಪ್ರಮುಖಾಂಶಗಳೆಂದರೆ ನೌಕರರಿಗೆ ಬರುವಂತಹ ತಿಂಗಳ ವೇತನದಲ್ಲಿ ಅವರ ಮುಂದಿನ ಭವಿಷ್ಯಕ್ಕೆ ಅಥವಾ ನಿವೃತ್ತಿಯ ನಂತರದ ಜೀವನಕ್ಕೆ ಸಹಕಾರಿಯಾಗಲೆಂದು ಈ ಕಾನೂನನ್ನು ಜಾರಿಗೊಳಿಸಲಾಯಿತು. ಒಮ್ಮೆ ಕಾರ್ಖಾನೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಒಬ್ಬ ನೌಕರ ನಿವೃತ್ತಿಯ ನಂತರದ ಬದುಕಿನ ಬಗ್ಗೆ ವ್ಯಕ್ತಪಡಿಸಿದಾಗ, ಆಗ

ಭವಿಷ್ಯನಿಧಿ (ಕಜಚಟಿಠಟಿ) ನೀಡಲು ಚಿಂತನೆ ನಡೆಸಲಾಯಿತು. ಈ ಯೋಜನೆಯಲ್ಲಿ ನೌಕರನ ಸಂಬಳದ ಒಂದಿಷ್ಟು ಭಾಗವನ್ನು ಉಳಿತಾಯ ಮಾಡಿ ಸಂಗ್ರಹಿಸಿ, ಅದನ್ನು ನಿವೃತ್ತಿಯಾದ ನಂತರ ನೀಡಲಾಗುತ್ತದೆ. ಒಂದು ವೇಳೆ ನೌಕರನು ಮಧ್ಯಂತರದಲ್ಲಿಯೇ ನಿಧನ ಹೊಂದಿದರೆ, ಈ ಮೊದಲೇ ಸೂಚಿಸಿರುವ(ಓಂಟಟಿಜಜ)ವ್ಯಕ್ತಿಗೆ ಭವಿಷ್ಯನಿಧಿ ಹಣವನ್ನು ನೀಡಲಾಗುವುದು.

1948ರ ರಾಜ್ಯವಿಮಾ ಕಾಯಿದೆಯನ್ನು ಕಾರ್ಮಿಕರ ಅನಿಶ್ಚಿತತೆಯ ಪರಿಸ್ಥಿತಿಯನ್ನು ನಿವಾರಿಸಲು ಜಾರಿಗೆತರಲಾಯಿತು. ಇದರಲ್ಲಿ ಮಾಲಿಕ, ಸರ್ಕಾರ ಮತ್ತು ನೌಕರಿನಿಂದ ಪಡೆದ ನಿಧಿಯಿಂದ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

1. ಕಾಯಿಲೆಗಾಗಿ ಒಂದು ವರ್ಷದಲ್ಲಿ 28 ದಿನಗಳ ವೇತನ ಸಹಿತ ರಜೆ ನೀಡುವುದು.
2. ಕಾರ್ಮಿಕ ಮತ್ತು ಆತನ ಕುಟುಂಬದವರಿಗೆ ಉಚಿತ ಚಿಕಿತ್ಸೆ.
3. ಮಹಿಳಾ ಕಾರ್ಮಿಕರಿಗೆ ಪ್ರಸೂತಿ ಕಾಲದಲ್ಲಿ ಹಣಕಾಸಿನ ನೆರವು ನೀಡುವುದು.
4. ವಿಕಲಾಂಗ, ಉದ್ಯೋಗ ಹಾನಿ ಮತ್ತು ಕಾಯಿಲೆಗಳ ಸಮಯದಲ್ಲಿ ಕಾರ್ಮಿಕನಿಗೆ ನೆರವು.
5. ಮರಣಿಸಿದ ಕಾರ್ಮಿಕನ ಕುಟುಂಬಕ್ಕೆ ನೆರವು ನೀಡುವುದು.

ಈ ಕಾಯಿದೆಯಲ್ಲಿ ಅಡಕವಿಲ್ಲದ ಎಷ್ಟೋ ವಿಷಯಗಳನ್ನು ಮಾಲೀಕರು ಒದಗಿಸಿಕೊಡುತ್ತಾರೆ. ಅವುಗಳಲ್ಲಿ ಶಿಕ್ಷಣ ಮತ್ತು ಮನರಂಜನೆ. ಕೆಲವೊಮ್ಮೆ ಚಿಕಿತ್ಸೆ ವೆಚ್ಚ ಭರಿಸಿದರೂ, ಕೆಲವು ವೇಳೆ ಮಾಲಿಕರು ತಮ್ಮದೇ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಯನ್ನು ಕೊಡಿಸುತ್ತಾರೆ. ಕಾರ್ಮಿಕರ ಮಕ್ಕಳಿಗೆ ಶಿಷ್ಯವೇತನ, ಪುಸ್ತಕ, ನೋಟ್‌ಬುಕ್ ಇತ್ಯಾದಿಗಳನ್ನೂ ನೀಡುವ ಕಾರ್ಖಾನೆಗಳಿವೆ. ಇತ್ತೀಚಿನ ದಿನಗಳಲ್ಲಿ ಕಾರ್ಮಿಕರಿಗೆ ಉಚಿತ ಸಾರಿಗೆ ವ್ಯವಸ್ಥೆಯನ್ನೂ ಸಹ ಮಾಡಿರುತ್ತಾರೆ. ಈ ಯೋಜನೆಯು ಆರಂಭದಲ್ಲಿ 50ಕ್ಕೂ ಹೆಚ್ಚು ನೌಕರರು ಕೆಲಸ ಮಾಡುವ ಕೈಗಾರಿಕೆಗಳಾದ ಸಿಮೆಂಟ್, ಇಂಜಿನಿಯರಿಂಗ್, ಉಕ್ಕು ಮತ್ತು ಸ್ಟೀಲ್, ವಸ್ತ್ರಗಳನ್ನು ಉತ್ಪಾದಿಸುವ ಕೈಗಾರಿಕೆಗಳಿಗೆ ಅನ್ವಯವಾಗುತ್ತಿತ್ತು. ಆದರೆ ಜಗಜೀವನರಾಮ್‌ರವರು ಸಮಸ್ತ ಕಾರ್ಮಿಕ ಹಿತದೃಷ್ಟಿಯಿಂದ ಎಲ್ಲಾ ವಿಭಾಗಗಳಿಗೂ ವಿಸ್ತರಿಸಿದರು.

ಸ್ವತಂತ್ರ ಭಾರತದಲ್ಲಿ(1947) ಬಹಳ ಕೈಗಾರಿಕೆಗಳು ಪ್ರವರ್ಧಮಾನಕ್ಕೆ ಬಂದವು. ಜೊತೆಗೆ ಗಣಿಗಾರಿಕೆಯೂ ರಾಷ್ಟ್ರದ ಸಂಪತ್ತನ್ನು ವೃದ್ಧಿಸುವಲ್ಲಿ ಪ್ರಮುಖಪಾತ್ರ ವಹಿಸುತ್ತದೆ ಎಂಬುದನ್ನು ಜಗಜೀವನರಾಮ್ ಮನಗಂಡಿದ್ದರು. ಆದರೆ ಈವರೆಗೆ ಗಣಿ ಕಾರ್ಮಿಕರನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ. ರಾಷ್ಟ್ರದ ಸಂಪತ್ತನ್ನು ವೃದ್ಧಿಸುವ ನೌಕರರ ಸ್ಥಿತಿಗತಿಗಳನ್ನು ಸುಧಾರಿಸು 1947ರಲ್ಲಿ 'ಕಲ್ಲಿದ್ದಲು ಗಣಿ ನೌಕರರ ಯೋಗಕ್ಷೇಮ ನಿಧಿ'ಯನ್ನು ಸ್ಥಾಪನೆ ಮಾಡಿದರು. ಈ ಯೋಜನೆಯು ನೌಕರರ ವೈದ್ಯಕೀಯ ವೆಚ್ಚ, ಮನರಂಜನೆ, ವಿದ್ಯಾಭ್ಯಾಸ ಹಾಗೂ ಅವರ ವಸತಿ ಸೌಲಭ್ಯಗಳನ್ನೊಳಗೊಂಡಿತ್ತು. ಇದರ ಮರುವರ್ಷ 1948ರಲ್ಲಿ 'ಗಣಿ ಭವಿಷ್ಯನಿಧಿ' ಯೋಜನೆ ಕಾಯಿದೆ ತಂದರು. ಈ ಯೋಜನೆಯ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಿ ಅವರ ಆರ್ಥಿಕ ಸಬಲತೆಗೆ ಕಾರಣವಾಯಿತು.

ಭಾರತದ ಪ್ರಮುಖ ಬಂದರುಗಳ ಹಡಗು ಕಟ್ಟೆಗಳಲ್ಲಿ ಕೆಲಸ ಮಾಡುವಂತಹ ಕೆಲಸಗಾರರ ಸ್ಥಿತಿಯು ತುಂಬಾ ಕ್ಲಿಷ್ಟಕರವಾದ ಸ್ಥಿತಿಯಾಗಿತ್ತು. ಏಕೆಂದರೆ ಅಲ್ಲಿನ ಕೆಲಸಗಾರರ ನಡುವಿನ ಆಂತರಿಕ ಭಿನ್ನಾಭಿಪ್ರಾಯಗಳು ಹಾಗೂ ಅವರ ಮೂಲಭೂತ ಸಮಸ್ಯೆಗಳು ಸರಿಯಾದ ಪ್ರಮಾಣದಲ್ಲಿ ಈಡೇರಿಕೆಯಾಗದಿದ್ದದ್ದು ಹಾಗೂ ನೌಕರರಿಗೆ ಸಮಾನ ಕೆಲಸಕ್ಕೆ ಸರಿಯಾದ ವೇತನ ನೀಡದ ದುಡಿಸಿಕೊಳ್ಳಲಾಗುತ್ತಿತ್ತು. ಇದು ಜಗಜೀವನರಾಮ್ ರವರ ಗಮನವನ್ನು ಸೆಳೆಯಿತು. ಅಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ನೌಕರರಿಗೆ

ಅನುಕೂವಾಗಲೆಂದು 1948ರಲ್ಲಿ 'ಹಡಗು ಕಟ್ಟೆ ನೌಕರರ ಮಸೂದೆ'ಯನ್ನು ಜಾರಿಗೆತಂದರು. ಹಡಗು ಕಟ್ಟೆ ಉದ್ಯಮವು ದೇಶಕ್ಕೆ ಅತ್ಯಧಿಕ ಲಾಭ ತರುವಂತಹದು. ಇದೊಂದು ಆರ್ಥಿಕ ಉದ್ದಿಮೆಯಾಗಿದ್ದು, ಆರ್ಥಿಕಾಭಿವೃದ್ಧಿ ದೃಷ್ಟಿಯಿಂದ ಇದನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯದು ರಾಜ್ಯದ ಅಧೀನದಲ್ಲಿಯೂ, ಎರಡನೆಯದು ಕೇಂದ್ರದ ಅಧೀನದಲ್ಲಿಯೂ ಇರುತ್ತದೆ. ಇವುಗಳ ಪ್ರಮುಖ ಕೆಲಸವೆಂದರೆ ಹಡಗುಕಟ್ಟೆಗೆ ನೌಕರರನ್ನು ದಾಖಲಾತಿ ಮಾಡಿಕೊಳ್ಳುವುದು ಹಾಗು ಅಲ್ಲಿನ ನೌಕರರಿಗೆ ಆರೋಗ್ಯ ರಕ್ಷಣೆ, ಕನಿಷ್ಠ ಕೂಲಿಯನ್ನು ವಿಧಿಸುವುದರ ಅಧಿಕಾರವನ್ನು ಹೊಂದಿದ್ದವು. 1966 ಮತ್ತು 1967ರಲ್ಲಿ ಎರಡನೇ ಅವಧಿಗೆ ಕಾರ್ಮಿಕ ಮಂತ್ರಿಯಾಗಿ ಅಧಿಕಾರವಹಿಸಿಕೊಂಡಾಗ ನವೆಂಬರ್ 1, 1966ರಲ್ಲಿ ಕಂಟ್ರಾಕ್ಟ್ ಲೇಬರ್ ಬಿಲ್‌ನ್ನು ಮಂಡಿಸಿದರು. ಈ ಮಸೂದೆಯ ಜಾರಿಯಿಂದಾಗಿ ಗುತ್ತಿಗೆ ನೌಕರರ ಸ್ಥಿತಿಗತಿಗಳು ಸುಧಾರಿಸುವಂತಾಯಿತು. ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಗುತ್ತಿಗೆ ಕಾರ್ಮಿಕರ ಮೂಲ ಸಮಸ್ಯೆಗಳು ಹಾಗೂ ಅವರ ವೇತನದಲ್ಲಿ ತಾರತಮ್ಯ ಸಂಪೂರ್ಣವಾಗಿ ಹೋಗಲಾಡಿಸಲಾಯಿತು.

ಜಗಜೀವನರಾಮ್‌ರವರು ಕಾರ್ಮಿಕ ಮಂತ್ರಿಯಾಗಿ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಹಲವಾರು ಶಾಸನಗಳು, ಕಾನೂನು ಕಾಯಿದೆಗಳನ್ನು ಜಾರಿಗೆತಂದರೂ, ಕಾರ್ಮಿಕರ ಸ್ಥಿತಿಗತಿಗಳಲ್ಲಿ ತೃಪ್ತಿಕರ ಸುಧಾರಣೆ ಕಂಡುಬರಲಿಲ್ಲ. ಇವುಗಳಿಗೆ ಮೂಲ ಕಾರಣಗಳನ್ನು ಕಂಡುಹಿಡಿಯುವ ಸಲುವಾಗಿ ಜಗಜೀವನರಾಮರು ನಿವೃತ್ತ ನ್ಯಾಯಮೂರ್ತಿಯವರಾದ ಶ್ರೀ ಗಜೇಂದ್ರಗಢಕರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿದರು.

ಹೀಗೆ ಜಗಜೀವನರಾಮ್‌ರವರು ಕಾರ್ಮಿಕ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಕಾರ್ಮಿಕರ ಹಿತರಕ್ಷಣೆ ಕುರಿತು ಜಾರಿಗೆತಂದಂತಹ ಹಲವಾರು ಕಾನೂನು ಕಾಯ್ದೆಗಳನ್ನು ಮೌಲ್ಯಮಾಪನ ಮಾಡಿದರೆ ಅವರಿಗೆ ಕಾರ್ಮಿಕ ವರ್ಗದ ಏಳಿಗೆಯ ಕಡೆ ಅವರಿಗಿದ್ದ ಆಳವಾದ ಕಾಳಜಿಯ ಬಗ್ಗೆ ತಿಳಿಯುತ್ತದೆ. ಇವರ ದೃಢ ನಿಲುವಿನಲ್ಲಿ ಪ್ರಾರಂಭಗೊಂಡ ಕಾರ್ಮಿಕ ಚಟುವಟಿಕೆಗಳು ನೌಕರರಲ್ಲಿ ಹೊಸ ಅರಿವನ್ನು ಮೂಡಿಸಿ ನವಭಾರತ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿತು. ಇವರ ಉತ್ತಮ ಕೆಲಸಕ್ಕಾಗಿ ನೌಕರ ವರ್ಗದವರು ಇವರನ್ನು ಎಷ್ಟು ಶ್ಲಾಘಿಸಿದರೂ ಅದು ಕಡಿಮೆಯೇ. ಇವರು ಜಾರಿಗೆ ತಂದಂತಹ ಕಾನೂನು ಕಾಯ್ದೆಗಳು ಇಂದಿಗೂ ಚಾಲ್ತಿಯಲ್ಲಿದ್ದು, ಕಾರ್ಮಿಕರ ಪಾಲಿಗೆ ಸಂಜೀವಿನಿಯಾಗಿದೆ.

ಜಯಪ್ರಕಾಶ ನಾರಾಯಣರವರು ಅಭಿಪ್ರಾಯ ಪಡುವಂತೆ, ಬಾಬೂಜಿ ಕೇವಲ ಒಬ್ಬ ವ್ಯಕ್ತಿಯಷ್ಟೇ ಅಲ್ಲ ಅವರೊಬ್ಬ ರಾಜನೀತಿ ಮತ್ತು ಸಾಮಾಜಿಕ ಶಕ್ತಿಯಿದ್ದಂತೆ, ಆದ್ದರಿಂದ ಇವರ ಸಹಭಾಗಿತ್ವವಿಲ್ಲದೆ ನವಭಾರತ ನಿರ್ಮಾಣ ಕಲ್ಪನೆಯನ್ನು ಊಹಿಸಲು ಸಾಧ್ಯವಿಲ್ಲ.

**ಪರಾಮರ್ಶನ ಗ್ರಂಥಗಳು**


- ಬೆಳಕವಾಡಿ ರಂಗಸ್ವಾಮಿ. (2016). *ಡಾ.ಬಾಬೂ ಜಗಜೀವನರಾಮ್ ಅವರ ಐದು ದಶಕಗಳ ಸಾಧನೆ.* ಸಪ್ನ ಬುಕ್‌ಹೌಸ್.
- ದಾಸನೂರು ಕೂಸಣ್ಣ. (2004). *ಸಮರ್ಥ ಸಂಸದೀಯ ಪಟು ಡಾ. ಬಾಬೂ ಜಗಜೀವನರಾಮ್.* ಮಾತಂಗ ಪ್ರಕಾಶನ.
- ಕುಮಾರಯ್ಯ, ಡಿ.ಕೆ. (2010). *ಡಾ.ಬಾಬು ಜಗಜೀವನರಾಮ್ ದರ್ಶನ.* ಗೋಕುಲ್ ಪ್ರಕಾಶನ,
- ಲಿಂಗಪ್ಪ, ಎಚ್. (2010). *ಸಮಾಜಮುಖಿ ರಾಜಕಾರಣಿ.* ರಶ್ಮಿ ಪ್ರಕಾಶನ.
- ಲಿಂಗಪ್ಪ, ಎಚ್. (2012). *ನೊಂದವರ ಬೆಳಕು.* ರಶ್ಮಿ ಪ್ರಕಾಶನ.

- ವೆಂಕಟೇಶ್, ಎ. (2010). ಡಾ.ಬಾಬೂ ಜಗಜೀವನರಾಮ್. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಯಲ್ಲಪ್ಪ ಬೂತಯ್ಯ, ಟಿ. (2005). *ಬಾಬೂ ಜಗಜೀವನರಾಮ್–ಆಯ್ದ ಭಾಷಣಗಳು ಮತ್ತು ಬರೆಹಗಳು*. ಆದಿ ಭಾರತ ಸಾಹಿತ್ಯ ಪ್ರಕಾಶನ.
- ಯಲ್ಲಪ್ಪ ಬೂತಯ್ಯ, ಟಿ. (2010). *ಹಸಿರು ಕ್ರಾಂತಿಯ ಹರಿಕಾರ–ಬಾಬೂ ಜಗಜೀವನರಾಮ್*. ಆದಿ ಭಾರತ ಸಾಹಿತ್ಯ ಪ್ರಕಾಶನ.